ಆಗಿದ್ದ ಸೊಸೈಟಿಯಲ್ಲಿ ಗುಮಾಸ್ತೆ ಕೆಲಸ ಕೊಡಿಸಿದ್ದಳು. ‘ಡಿಗ್ರಿ ಇದ್ದಿದ್ರೆ ನಮ್ಮ ಸಹಕಾರಿ ಬ್ಯಾಂಕ್‌ಗೆ ಶಿಫಾರಸ್ಸು ಮಾಡಬಹುದಿತ್ತು’ ಎಂದು ಹೇಳಿದ್ದು ತಲೆಯಲ್ಲಿತ್ತಲ್ಲ? ಖಾಸಗಿಯಾಗಿ ಓದಿ ಪದವಿ ಪಡೆದ ಮೇಲೆ ಮತ್ತೆ ಮಾನಸಿಯ ಚಿಕ್ಕಪ್ಪನ ಶಿಫಾರಸ್ಸಿನಲ್ಲಿ ಬ್ಯಾಂಕ್‌ನಲ್ಲಿ ಕೆಲಸ ಸಿಕ್ಕಿತ್ತು. ಅನಂತರದ ದಿನಗಳಲ್ಲಿ ಅತ್ತೆಯ ಮನೆಯಿಂದ ಹೊರಬಂದು ಸಣ್ಣ ಮನೆ ಮಾಡಿದ್ದೆ. ನನ್ನ ಕೈ ನನ್ನ ಬಾಯಿ... ಕಷ್ಟದಲ್ಲೂ ದಿನ ಸವೆದಿತ್ತು. ಜಿಷ್ಣು, ಮೊದಮೊದಲು ಅಪ್ಪನ ಕುರಿತು ಯಾರಾದರೂ ಪ್ರಶ್ನಿಸಿದರೆ ಅವಮಾನದಿಂದ ತಲೆತಗ್ಗಿಸುತ್ತಿದ್ದವ, ಹೈಸ್ಕೂಲಿಗೆ ಬರುತ್ತಲೇ ಗೆಳೆಯರೊಂದಿಗೆ ತನ್ನ ಅಪ್ಪ ಸತ್ತುಹೋಗಿದ್ದಾನೆ ಎಂದು ತಾನೇ ಒಂದು ಉತ್ತರ ಕಂಡುಕೊಂಡಿದ್ದ. ವಿದ್ಯೆ ಅವನ ಕೈ ಹಿಡಿದಿತ್ತು. ಅಮೆರಿಕಕ್ಕೆ ಎರಡು ವರ್ಷಕ್ಕೆ ಅಂತ ಹೋದವ ಅಲ್ಲಿಯೇ ಇರುವ ನಿರ್ಧಾರ ಮಾಡಿದ್ದ. ಅಲ್ಲಿಯವರೆಗೆ ಅನಿವಾರ್ಯವಾಗಿ ಕೆಲಸಕ್ಕೆ ಹೋಗುತ್ತಿದ್ದೆ. ಅನಂತರ ಹೊತ್ತು ಹೋಗಲು ಕೆಲಸಕ್ಕೆ ಹೋಗುವಂತಾಗಿತ್ತು. ನನ್ನ ಬ್ಯಾಂಕ್‌ನಲ್ಲೇ ಸಾಲಮಾಡಿ ಈಗಿರುವ ಫ್ಲ್ಯಾಟ್ ಖರೀದಿಸಿದ್ದೆ.

